**ಅ.ದಾವಾ ನಂ. 161/2017** **ಡಿ.ಡಬ್ಲ್ಯೂ-1**

**ದಿನಾಂಕ 28/06/2023 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಹೆಚ್.ವಿ. ವಕೀಲರಿಂದ**

ಈ ದಾವೆಯನ್ನು ಸಲ್ಲಿಸಿರುವ ವಾದಿ ನನ್ನ ಮಗನಾಗುತ್ತಾನೆ. ನನಗೆ 5 ಮಂದಿ ಮಕ್ಕಳಿರುತ್ತಾರೆ. ನನ್ನ ಮಕ್ಕಳಲ್ಲಿ ನನ್ನ ಜೊತೆ ಚೆನ್ನಾಗಿ ಇರುವುದಿಲ್ಲ, ಮಿಕ್ಕವರು ಚೆನ್ನಾಗಿ ಇರುತ್ತಾರೆ. ನನ್ನ ತಂದೆಗೆ ಚನ್ನೇಗೌಡ ಮತ್ತು ಮಾಟೇಗೌಡ ಎಂಬ ಎರಡು ಹೆಸರು ಇರುತ್ತದೆ ಎಂದರ ಸರಿ. ನಮ್ಮ ತಂದೆಗೂ 5 ಮಂದಿ ಮಕ್ಕಳಿದ್ದರು. 3 ಹೆಣ್ಣು, ಇಬ್ಬರು ಗಂಡುಮಕ್ಕಳು. ನನ್ನ ತಂದೆಯ ಆಸ್ತಿಯನ್ನು ನಾವು ಗಂಡುಮಕ್ಕಳು ಮಾತ್ರ ಸಮನಾಗಿ ಹಂಚಿಕೊಂಡೆವು, ಹೆಣ್ಣುಮಕ್ಕಳಿಗೆ ಭಾಗ ಕೊಡಲಿಲ್ಲ. ನಾನು ಮತ್ತು ನನ್ನ ತಮ್ಮ ವಿಭಾಗ ಮಾಡಿಕೊಂಡಾಗ ನನ್ನ ತಂದೆ ಬದುಕಿರಲಿಲ್ಲ. ನಾನು ಮತ್ತು ನನ್ನ ತಮ್ಮ ಸರ್ಕಾರಿ ನೌಕರರೆಂದರೆ ಸರಿ. ನಾನು 1962 ರಿಂದ 1991 ರವರೆಗೂ ಸರ್ಕಾರಿ ಸೇವೆಯನ್ನು ಮಾಡಿದ್ದೆನು. ನಾನು ನಿವೃತ್ತಿಯಾದ ಕಾಲಕ್ಕೆ ನನಗೆ 2,500 ಸಂಬಳ ಬರುತ್ತಿತು. ನಾನು ನಿವೃತ್ತಿಯಾದ ಕಾಲಕ್ಕೆ ನಾನು ಮತ್ತು ನನ್ನ ಮಕ್ಕಳೆಲ್ಲರೂ ಒಟ್ಟಾಗಿದ್ದೆವು ಎಂದರೆ ಸರಿ. ನಾವೆಲ್ಲರೂ ಒಟ್ಟಾಗಿ ಇದ್ದಾಗಲೇ ನನ್ನ ಮಕ್ಕಳ ಮದುವೆಯನ್ನು ನಾನು ಮಾಡಿರುತ್ತೇನೆ.

2. ನನ್ನ ಮಕ್ಕಳಲ್ಲಿ ರವಿಕುಮಾರ ಒಬ್ಬ ಮಾತ್ರ ಕೆಲಸದಲ್ಲಿದ್ದಾನೆ. ಕುಮಾರನು ಮದುವೆಗಳಿಗೆ ಶಾಮಿಯಾನ ಸರಬರಾಜು ಮಾಡುವ ಕೆಲಸ ಮಾಡುತ್ತಾರೆ. ಪುಟ್ಟರಾಜು ಊರಿನಲ್ಲಿ ಅಂಗಡಿಯನ್ನು ಇಟ್ಟುಕೊಂಡಿದ್ದಾರೆ. ರಮೇಶನಿಗೆ ಆರೋಗ್ಯ ಸರಿಯಿಲ್ಲದೇ ಮನೆಯಲ್ಲಿಯೇ ಇದ್ದಾನೆ. ಕುಮಾರನು ಚನ್ನರಾಯಪಟ್ಟಣದಲ್ಲಿ ವಾಸವಿದ್ದಾನೆ. ರವಿಕುಮಾರ ಹಾಸನದಲ್ಲಿ ವಾಸವಿದ್ದಾನೆ. ರಮೇಶ ಮತ್ತು ಪುಟ್ಟರಾಜು ಊರಿನಲ್ಲಿಯೇ ಇದ್ದಾರೆ. ರಮೇಶ ಮತ್ತು ಪುಟ್ಟರಾಜು ಇಬ್ಬರೇ ಜಮೀನಿನ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಎಲ್ಲಾ ನಾನೇ ಮಾಡಿಸುತ್ತೇನೆ ಎಂದು.

3. ನಾನು ದೈಹಿಕ ಅಂಗವಿಕಲತೆಯನ್ನು ಹೊಂದಿದ್ದು ಅದರ ಬಗ್ಗೆ ದೃಢೀಕರಣ ಪತ್ರ ನನ್ನ ಬಳಿ ಇದೆ. ನಿಮಗೆ ದೈಹಿಕ ಅಂಗವಿಕಲತೆ ಇರುವ ಕಾರಣ ಜಮೀನಿನ ಕೆಲಸ ಮಾಡಲಾಗುವುದಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಕೈಯಲ್ಲಿ ಶಕ್ತಿ ಇದ್ದಾಗ ಮಾಡುತ್ತಿದ್ದೆ ಈಗ ಆಗುವುದಿಲ್ಲ ಎಂದು. ನಾನು ನನ್ನ ಹೆಂಡತಿ ಪ್ರತ್ಯೇಕವಾಗಿ ವಾಸವಿದ್ದು, ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಟ್ಟಿದ್ದೇನೆ. ಸಾಕ್ಷಿ ಹೇಳುತ್ತಾರೆ ಪಿತ್ರಾರ್ಜಿತ ಆಸ್ತಿಗಳಲ್ಲಿ ಮಾತ್ರ ವಿಭಾಗ ಮಾಡಿಕೊಟ್ಟಿದೇನೆ ಎಂದು. ಮಿಕ್ಕಾ ಆಸ್ತಿಗಳನ್ನು ವಿಭಾಗ ಮಾಡಿಕೊಡಲು ನಿಮಗೆ ತೊಂದರೆ ಇದೆಯೇ ಎಂದು ಪ್ರಶ್ನಿಸಲು ಸಾಕ್ಷಿ ಹೆಳುತ್ತಾರೆ ನನ್ನ ಹಾರೈಕೆಗೆ ಬೇಕು ಎಂದು.

4. ನಿವೃತ್ತಿ ಹೊಂದಿದ ನಂತರ ನನಗೆ ಪಿಂಚಣಿ ಹಣ ಬರುತ್ತಿದೆ. ದಾಖಲಾತಿಯಲ್ಲಿ ನಾನು ಯಾವುದೇ ವಿಭಾಗ ಮಾಡಿಕೊಟ್ಟಿಲ್ಲ. ಯಾವ ಯಾವ ಜಮೀನಲ್ಲಿ ಎಷ್ಟೆಷ್ಟು ಭಾಗ ಮಾಡಿಕೊಟ್ಟಿದ್ದಿರೀ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಬಾಯಿ ಮಾತಿನಲ್ಲಿ ಹೇಳಲಾಗುವುದಿಲ್ಲ, ಒಂದೊಂದು ಸರ್ವೆ ನಂಬರಿನಲ್ಲಿ ಕೊಟ್ಟಿದ್ದೇನೆ ಎಂದು. ರವಿಕುಮಾರನು ಹಾಸನದ ಡೈರಿಯಲ್ಲಿ ಈಗ್ಗೆ 8-10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. 2 ಮತ್ತು 3 ನೇ ಪ್ರತಿವಾದಿಗಳು ಆಗಲೋ ಈಗಲೋ ನಿಮ್ಮ ಮನೆಗೆ ಬರುತ್ತಾರೆ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ದಿನವೂ ಬಂದು ಹೋಗುತ್ತಾರೆ ಎಂದು. 2 ಮತ್ತು 3 ನೇ ಪ್ರತಿವಾದಿಗಳು ನನಗೆ ಪಿಂಚಣಿ ಹಣ ಬರುವ ಕಾರಣ ಯಾವುದೇ ಹಣ ನನಗೆ ನೀಡುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುತ್ತೇವೆ, ಯಾವುದೇ ಕೆಲಸದವರನ್ನು ಇಟ್ಟುಕೊಂಡಿಲ್ಲ. ನೀವು ಶಿಕ್ಷಕರಾಗಿದ್ದ ಕಾಲಕ್ಕೆ ಮಕ್ಕಳ ತಂದೆ-ತಾಯಿಯೇ ಮಕ್ಕಳನ್ನು ಶಾಲೆಗೆ ಮಕ್ಕಳನ್ನು ಪ್ರವೇಶ ಕೊಡಿಸಿ ಅವರ ಪ್ರವೇಶ ಶುಲ್ಕವನ್ನೆಲ್ಲಾ ಅವರೇ ಪಾವತಿ ಮಾಡುತ್ತಿದ್ದರು ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನಮ್ಮ ಕಾಲದಲ್ಲಿ ಪ್ರವೇಶ ಶುಲ್ಕವೆಲ್ಲಾ ಇರಲಿಲ್ಲವೆಂದು. ನನ್ನ ತಕರಾರಿನಲ್ಲಿ ಸ್ವಯಾರ್ಜಿತ ಭಾಗ ಕೊಡಲಾಗುವುದಿಲ್ಲ ಎಂದು ಬರೆಸಿ ಸಲ್ಲಿಸಿದ್ದೇನೆ.

<u>ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.</u>

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**